ಶ್ರೀ ಬಿ.ಎನ್. ಬಚ್ಚೇಗೌಡ :- ಸರಿ ಸ್ವಾಮಿ

ಹುಬ್ಬಳ್ಳಿಯ ಐ.ಟಿ. ಪಾರ್ಕ್‌ಗೆ ಹಣ ಬಿಡುಗಡೆ

17 (312) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ನಿರ್ಮಿಸಿರುವ ಐ.ಟಿ. ಪಾರ್ಕಿನಿಂದ ಮಹಾನಗರ ಪಾಲಿಕೆಗೆ ಬರಬೇಕಾದ ಬಾಕಿ ಹಣವೆಷ್ಟು?

ಆ) ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಉಳಿದ ಹಣ ಯಾವಾಗ ಬಿಡುಗಡೆ ಮಾಡಲಾಗುತ್ತದೆ?

ಇ) ಮಹಾನಗರ ಪಾಲಿಕೆಯಿಂದ ಎಷ್ಟು ಹಣ ನೀಡಿ ಸದರಿ ಸ್ಥಳವನ್ನು ಐ.ಟಿ. ಪಾರ್ಕಿಗಾಗಿ ಖರೀದಿ ಮಾಡಲಾಗಿದೆ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಹುಬ್ಬಳ್ಳಿಯಲ್ಲಿ ನಿರ್ಮಿಸಿರುವ ಐಟಿ ಪಾರ್ಕಿಗಾಗಿ ಕಿಯೋನಿಕ್ಸ್ ಸಂಸ್ಥೆಯು ಖರೀದಿಸಿರುವ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಾಣಿಜ್ಯ ಸಂಕೀರ್ಣದ ಬಾಬ್ತು ಇನ್ನೂ ರೂ. 2,99,19,000 ಹಣವನ್ನು ಪಾವತಿಸಬೇಕಾಗಿದೆ.

ಆ) ಮಹಾನಗರ ಪಾಲಿಕೆಗೆ ಈವರೆಗೆ ರೂ. 15,83,81,000/-ಗಳನ್ನು ಪಾವತಿ ಮಾಡಲಾಗಿದೆ. ಮಹಾನಗರ ಪಾಲಿಕೆಯು ಸದರಿ ಆಸ್ತಿಯ ದಾಖಲೆಗಳನ್ನು ಕಿಯೋನಿಕ್ಸ್ ಹೆಸರಿಗೆ ವರ್ಗಾಯಿಸಿದೆ ಉಳಿದ ಹಣ ರೂ. 2,99,19,000/- ಗಳನ್ನು ಮಹಾನಗರ ಪಾಲಿಕೆಗೆ ಪಾವತಿಸಲಾಗುವುದು.

ಇ) ಸ್ಥಳ ಮತ್ತು ಕಟ್ಟಡದ ಅರ್ಹ ಬೆಲೆಯು ರೂ. 18.83 ಕೋಟಿಗಳೆಂದು ಸರಕಾರವು ಲೆಕ್ಕಹಾಕಿ, ಇಷ್ಟು ಮೊತ್ತವನ್ನು ಪಾವತಿಸಲು ತೀರ್ಮಾನಿಸಿದೆ.

ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ :- ಮಾನ್ಯ ಅಧ್ಯಕ್ಷರೇ, ಸಚಿವರು ಉತ್ತರ ಕೊಟ್ಟಿರುತ್ತಾರೆ. ಆದರೆ ಅದಕ್ಕೂ ಮಹಾನಗರಪಾಲಿಕೆಯ ಮಾಹಿತಿಗೂ ಫರಕ್ಕಿದೆ. ಅದರ ಸಲುವಾಗಿ ನಾನು ಮಂತ್ರಿಗಳನ್ನು ಕೇಳುವುದೇನೆಂದರೆ, 13ನೇ ತಾರೀಖು 99ನೇ ದಿನಾಂಕ ಮಹಾನಗರಪಾಲಿಕೆ ಮತ್ತು ಕಿಯೋನಿಕ್ಸ್ ನಡುವೆ ಅಗ್ರಿಮೆಂಟ್ ಆದ ಪ್ರಕಾರ 23 ಕೋಟಿ ಆ ಕರಾರು ಆಗಿರುತ್ತದೆ. ಆದರೆ ಆ ಅಗ್ರಿಮೆಂಟ್ ಕ್ಯಾಬಿನೆಟ್‌ನೊಳಗೆ ಮಹಾನಗರಪಾಲಿಕೆಯ ಅಭಿಪ್ರಾಯ ತೆಗೆದುಕೊಳ್ಳಲಾರದೆ ಸುಮೋಟೋ 18.99 ಕೋಟಿಗೆ ನೀವು ನಿರ್ಧರಿಸುವುದು ಕ್ರಮಬದ್ಧವೇ ಎಂದು ನಾನು ಕೇಳುತ್ತೇನೆ. ಎರಡನೆಯದು ತಾವು ಕೈಗೊಂಡ ಈ ನಿರ್ಣಯದಿಂದ ಮಹಾನಗರಪಾಲಿಕೆಗೆ 6 ಕೋಟಿ ಹಾನಿಯಾಗುತ್ತದೆ. ಇದಕ್ಕೆ ಯಾರು ಜವಾಬ್ದಾರಿ? ಮತ್ತು ಈ ಅಗ್ರಿಮೆಂಟ್ ಕಿಯೋನಿಕ್ಸ್ ಮತ್ತು ಮಹಾನಗರಪಾಲಿಕೆ ಮಧ್ಯೆ ಆಗಿ 4 ವರ್ಷವಾಯಿತು. ಈ ಕರಾರು ಪ್ರಕಾರ ಮಹಾನಗರಪಾಲಿಕೆಗೆ ಇಲ್ಲಿಯವರೆಗೆ ಬರಬೇಕಾದದ್ದು 10.43 ಕೋಟಿ ರೂ.ಗಳು. ಈ ರೊಕ್ಕವೂ ಇಲ್ಲ, ಇದರ ಮೇಲೆ ಬರುವ ಬಡ್ಡಿನೂ ಇಲ್ಲ. ಇದಕ್ಕೇನು ಕಾರಣ? ಮತ್ತು ಈ ಮಹಾನಗರಪಾಲಿಕೆಯಲ್ಲಿ ಇರುವ ಆರ್ಥಿಕ ಕಷ್ಟವನ್ನು ನಿವಾರಣೆ ಮಾಡಲು ನೀವು ಯಾವ್ಯಾವ ಕ್ರಮ ಕೈಗೊಳ್ಳುತ್ತೀರಿ ತಿಳಿಸಿ.

ಶ್ರೀ ಡಿ.ಬಿ. ಇನಾಂದಾರ್ :- ಮಾನ್ಯ ಅಧ್ಯಕ್ಷರೇ, 8-1-99ರಂದು ಈ ಮಹಾನಗರಪಾಲಿಕೆಯು 23 ಕೋಟಿ ರೂ ಎಂದು ಒಂದು ನಿರ್ಣಯ ಕೈಗೊಂಡಿದ್ದರು. ಅದರ ನಂತರ Urban Development Secretary ಹತ್ತಿರ ಸಭೆ ನಡೆದು ಮಹಾನಗರಪಾಲಿಕೆಯು ಆಗಿನ ಕಮೀಷನ್‌ರಾಗಿದ್ದವರು ಬರೆದದ್ದು ಏನೆಂದರೆ ಮಹಾನಗರಪಾಲಿಕೆಯಿಂದ ಖರ್ಚಾದ 18.83 ಕೋಟಿ ರೂ.ಗಳನ್ನು ಕೊಡಬೇಕೆಂದು ಸರ್ಕಾರದ ಒಂದು ಆಜ್ಞೆ ಹೊರಟಿದೆ. ಆ ಕಾರಣದಿಂದ ಈಗಾಗಲೇ 15.83 ಕೋಟಿ ರೂ. ಗಳನ್ನು ಸರ್ಕಾರದಿಂದ ಕೊಟ್ಟಿದ್ದೇವೆ. ಈ ಸ್ಥಳವನ್ನು ಹಸ್ತಾಂತರ ಮಾಡಿದ ನಂತರ ಬಾಕಿಯಾದ 2.99 ಕೋಟಿ ರೂ. ಗಳನ್ನು ಮಹಾನಗರಪಾಲಿಕೆಗೆ ಕೊಡಲು ಸರ್ಕಾರ ಸಿದ್ಧವಿದೆ.

ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ :- ಮಹಾನಗರಪಾಲಿಕೆಯನ್ನು ಕೇಳದೆಯೇ ಕಮೀಷನರ್ ಮತ್ತು HUD Secretary ಕೊಡಿ ಆ ಅಗ್ರಿಮೆಂಟನ್ನು ಕಿತ್ತುಹಾಕಲು ಆಗುತ್ತದೇನು? 23 ಕೋಟಿ ರೂ ಗೆ ಕರಾರು ಆಗಿದೆ, ಇವರಿಬ್ಬರೂ ಕೂಡ ಯಾರ ಕನ್‌ಸೆಂಟೂ ಇಲ್ಲದೆ 18.93 ಕೋಟಿ ರೂ. ಗೆ ನಿರ್ಣಯ ಮಾಡುವ ಹಕ್ಕು ನಿಮಗೆ ಹೇಗೆ ಬಂತು? ಈ ಮಹಾನಗರಕ್ಕೆ ಆಗುವ ಹಾನಿಗೆ ಯಾರು ಕಾರಣ? ಹೇಳಿ.

ಶ್ರೀ ಡಿ.ಬಿ. ಇನಾಂದಾರ್ :- 18,82,98,000 ರೂ ಎಂದು ಮಹಾನಗರಪಾಲಿಕೆಯ Chief Accounts Officer ರಿಂದಲೇ ಲೆಕ್ಕಪತ್ರ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಮಾನ್ಯ ಹೊನ್ನಳ್ಳಿಯವರು ಬಹಳ ಸಮರ್ಪಕವಾಗಿ ಅಂಕಿಸಂಖ್ಯೆ ಹೇಳಿದ್ದಾರೆ. ವಾಸ್ತವವಾಗಿ ಕರಾರು ಆಗಿದ್ದು 23 ಕೋಟಿ ರೂ. ಆ ಕರಾರಿನ ನಕಲು ತೆಗೆದುನೋಡಲಿ. ಮಾನ್ಯ ಇನಾಂದಾರರು ಕಿಯೋನಿಕ್ಸ್ ಮತ್ತು ಕಾರ್ಪೊರೇಷನ್ ನಡುವೆ ಏನೊಂದು ಕರಾರು ಆಗಿದೆ ಆ ಆಸ್ತಿ ಖರೀದಿ ಮಾಡುವಾಗ ಅದನ್ನು ತಾವು ದಯವಿಟ್ಟು ಇಲ್ಲಿ ಸದನದ ಮುಂದೆ ಇಡಿ. 23 ಕೋಟಿ ರೂ. ಕರಾರು ಆಗಿದೆ. ಆಮೇಲೆ ಹುಡ್ಕೋ ಸಾಲ 11.37 ಕೋಟಿ ರೂ.ಗಳು ಅದನ್ನೂ ಕೊಡುವಂತಹ ಜವಾಬ್ದಾರಿ ಕಿಯೋನಿಕ್ಸ್‌ದು. 1 ಕೋಟಿ ರೂ ಕಾರ್ಪೊರೇಷನ್ನಿಗೆ ಅಡ್ವಾನ್ಸ್ ಕೊಟ್ಟಿದ್ದೀರಿ. ಅಷ್ಟೇ ಇಲ್ಲಿಯವರೆಗೆ ಕೊಟ್ಟಿರುವುದು ಮುಂದೆ ಈ 23 ಕೋಟಿಯೊಳಗೆ ಈ 11.37 ಕೋಟಿ ಪ್ಲಸ್ ಒಂದು ಕೋಟಿ ಇದನ್ನು ಮೈನಸ್ ಮಾಡಿದಾಗ ಇನ್ನೂ 10.43 ಕೋಟಿ ರೂ. ಗಳನ್ನು ನೀವು ಕೊಡಬೇಕಾಗುತ್ತದೆ ನಿಮ್ಮ HUD Secretary, Finance Secretary ಗಳು ಸರ್ಕಾರದ ಮಟ್ಟದಲ್ಲಿ ಕುಳಿತು ಮಾತನಾಡಿ ಕೇವಲ 2.99 ಕೋಟಿ ರೂ. ಮಾತ್ರ ಬಾಕಿ ಉಳಿದಿದೆ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ? ಮಹಾನಗರಪಾಲಿಕೆಗೆ ಬರಬೇಕಾದ್ದು 10.43 ಕೋಟಿ ರೂ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಗಡ್ಡಿಯವರು ಇಲ್ಲೇ ಇದ್ದಾರೆ, ಅವರಿಗೆ ಎಲ್ಲಾ ಗೊತ್ತಿದೆ. ಮಾನ್ಯ ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್‌ರವರು ನಗರಪಾಲಿಕೆಗೆ ಬಂದು ಹೋದರು. ಇದಕ್ಕೆ ವಿಶೇಷ ಸಭೆ ಕರೆಯುತ್ತೇವೆ ಎಂದು ಹೇಳಿದರು. ಕೇವಲ ಹತ್ತು ಕೋಟಿ ರೂಪಾಯಿಗಳ ಸಲುವಾಗಿ ಇವತ್ತು ಅಲ್ಲಿ ಐಟಿಪಾರ್ಕ್ ಪ್ರಾರಂಭವಾಗುತ್ತಿಲ್ಲ ನೀವು ಹತ್ತು ಕೋಟಿ ರೂಪಾಯಿ ಸಲುವಾಗಿ ಶಾಣೆತನ ಮಾಡುತ್ತಿದ್ದೀರಿ. ಆದರೆ ಬೇರೆ ಬೇರೆಯದಕ್ಕೆಲ್ಲ ನೀವು ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಬೆಂಗಳೂರು ಮಹಾನಗರ

ಸಭೆಗೆ ಸಾಕಷ್ಟು ಕೊಡುತ್ತಿದ್ದೀರಿ. ನಾವು ಅದಕ್ಕೆ ಅಬ್ಜೆಕ್ಷನ್ ಮಾಡುವುದಿಲ್ಲ. ಬೇಕಾದಷ್ಟು ಕೊಡಿ. ಆದರೆ ಹತ್ತು ಕೋಟಿ ರೂಪಾಯಿ ಅಭಿವೃದ್ಧಿ ಸಲುವಾಗಿ ಅನುಕೂಲವಾಗುವಂಥದ್ದು. ಅದನ್ನು ಕೊಡಲಿಕ್ಕೆ ಹಿಂದೇಟು ಹಾಕುವಂಥದ್ದಲ್ಲ. ದಯವಿಟ್ಟು ತಕ್ಷಣವೇ ಈ ಹತ್ತು ಕೋಟಿ ನಲವತ್ತಮೂರು ಲಕ್ಷ ರೂಪಾಯಿಗಳನ್ನು ಬಿಡಗಡೆ ಮಾಡಬೇಕು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದ ಹೊನ್ನಾಳಿಯವರು ಕೇಳಿರುವುದು ಬಹಳ ದೊಡ್ಡ ಪ್ರಶ್ನೆ. ನಾವು ಮೂರು ಮಂದಿ ಹುಬ್ಬಳ್ಳಿ-ಧಾರವಾಡ ಮಹಾನಗರದ ಸದಸ್ಯರುಗಳು. ಬೆಂಗಳೂರಿನ ನಂತರ ಎರಡನೇ ದೊಡ್ಡ ಮಹಾನಗರ ಎನ್ನುತ್ತೇವೆ. ನಮ್ಮ ಮಹಾನಗರ ಪಾಲಿಕೆಯ ಹಣಕಾಸಿನ ಪರಿಸ್ಥಿತಿ ಬಹಳ ದುಸ್ತರ ಸ್ಥಿತಿಯಲ್ಲಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಅಲ್ಲಿ ಯಾವ ಗುಂಡಿಗಳನ್ನೂ ಮುಚ್ಚುವುದಕ್ಕೆ ಇವತ್ತು ಹಣ ಇಲ್ಲ. ಕಸ ತೆಗೆಯುವವರಿಗೆ ಕೂಲಿ ಕೊಡುವುದಕ್ಕೆ ಹಣ ಇಲ್ಲ. ಈ ರೀತಿ ಅಲ್ಲಿನ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಇವತ್ತು ಯಾವುದೇ ಕಾರಣಕ್ಕೆ ಇಲ್ಲಿ ಕುಳಿತುಕೊಂಡು ಈ ನಮೂನೆ ನಿರ್ಣಯವನ್ನು ಮಾಡಿ ನಮ್ಮ ಮಹಾನಗರ ಸಭೆಗೆ ಬರಬೇಕಾದಂಥ 10 ಕೋಟಿ 43 ಲಕ್ಷ ರೂಪಾಯಿಗಳನ್ನು ಅವರು ಕೊಡಬೇಕು. ಬೆಂಗಳೂರು ಒಂದೇ ಕರ್ನಾಟಕ ಎಂದು ತಿಳಿದುಕೊಂಡಿದ್ದರೆ ನಾವೇನು ಹೇಳುವುದಕ್ಕಾಗುವುದಿಲ್ಲ. ಆದರೆ ಬೆಂಗಳೂರಿನ ನಂತರ ಎರಡನೇ ದೊಡ್ಡ ಮಹಾನಗರ ಹುಬ್ಬಳ್ಳಿ-ಧಾರವಾಡ ಮಹಾನಗರ. ಇದಕ್ಕೆ ಕೊಡಬೇಕಾದ ಹಣಕ್ಕೆ ಇಲ್ಲಿ ಕುಳಿತು ಅವರೇನು ನಿರ್ಣಯ ಮಾಡುತ್ತಾರೆ? ಅಲ್ಲಿ ಷರತ್ತಿಗೆ ಒಪ್ಪಿಕೊಂಡಿರುವಂಥದ್ದು ಇವತ್ತು 10 ಕೋಟಿ 43 ಲಕ್ಷ ರೂಪಾಯಿಗಳನ್ನು ಕೊಟ್ಟು ಆ ಮಹಾನಗರದ ಬೆಳವಣಿಗೆಗೆ ಸಹಾಯ ಮಾಡಬೇಕೆಂದು ಹೇಳಿ ತಮ್ಮ ಮೂಲಕ ನಾವು ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಇನಾಂದಾರ್ :- ಮಾನ್ಯ ಅಧ್ಯಕ್ಷರೇ, ಮಹಾನಗರ ಪಾಲಿಕೆಯ ಅಕೌಂಟ್ಸ್ ಆಫೀಸರ್ ಶ್ರೀ ಕೃಷ್ಣಕುಮಾರ್‌ರವರು ಯುಡಿ ಸೆಕ್ರೆಟರಿ ಇದ್ದಾಗಲೇ ಮೀಟಿಂಗ್ ಮಾಡಿ ಕೇಳಿದಾಗ ಅವರು ವಿವರವನ್ನು ಕೊಟ್ಟಿದ್ದಾರೆ. ಇದಕ್ಕೆ ಖರ್ಚಾಗಿದ್ದು 18 ಕೋಟಿ 82 ಲಕ್ಷ ರೂಪಾಯಿಗಳು ಮತ್ತು ಆ ಕಾರಣದಿಂದ 18 ಕೋಟಿ 83 ಲಕ್ಷ ರೂ. ಗಳು ಎಂದು ಇದರ ಬೆಲೆಯನ್ನು ಕಟ್ಟಿ 16 ಕೋಟಿ 83 ಲಕ್ಷ ರೂ ಏನು ಮಹಾನಗರ ಪಾಲಿಕೆಯ ಮೇಲೆ ಹುಡ್ಕೋ ಲೋನ್ ಇತ್ತು. ಅದನ್ನೂ ಕೂಡ ನಾವು ತೀರಿಸಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಕೊಡತಕ್ಕದ್ದು 2 ಕೋಟಿ 99 ಲಕ್ಷ, 19 ಸಾವಿರ ರೂಪಾಯಿಗಳು ಮಾತ್ರ ಇವತ್ತು ಹಣ ತಯಾರಿದೆ. ಯಾವಾಗ ಇದನ್ನು ಕಿಯೋನಿಕ್ಸ್ ಅಥವಾ ಐಟಿ ಡಿಪಾರ್ಟ್‌ಮೆಂಟ್‌ಗೆ ಇದನ್ನು ಹಸ್ತಾಂತರ ಮಾಡುತ್ತಾರೆ, ಆಗ ಈ ಎರಡು ಕೋಟಿ 99 ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತೇವೆನ್ನುವ ಮಾತನ್ನು ಹೇಳುತ್ತಿದ್ದೇವೇ. ಇಲ್ಲಿ 23 ಕೋಟಿ 10 ಕೋಟಿ ಎಂದು ಕೇಳಿದಂಥ ಒಂದು ಅಭಿಪ್ರಾಯ ಮಹಾನಗರಪಾಲಿಕೆಯಿಂದ ಬಂದಿದೆ, ಆದರೆ ನನ್ನ ಹತ್ತಿರ ಇರತಕ್ಕಂಥ ದಾಖಲೆ ಪ್ರಕಾರ ಮಹಾನಗರ ಪಾಲಿಕೆಯಿಂದ ಬಂದದ್ದು ಹದಿನೆಂಟು ಕೋಟಿ ಎಂಭತ್ತೇಳು ಲಕ್ಷ ತೊಂಭತ್ತೆಂಟು ಸಾವಿರದ ಒಂಭೈನೂರ ತೊಂಭತ್ತಾರು ರೂಪಾಯಿ ಎಂಭತ್ತು ಪೈಸೆ, ಆ ಮಹಾನಗರ ಪಾಲಿಕೆಯ ದಾಖಲೆ ಕೂಡ ನನ್ನ ಹತ್ತಿರ ಇದೆ ಎನ್ನುವ ಮಾತನ್ನು ತಮ್ಮ ಮುಖಾಂತರ ತಿಳಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಿಮ್ಮ ಒರಿಜಿನಲ್ ಅಗ್ರಿಮೆಂಟ್ ತೋರಿಸಿ. ಆ ಅಗ್ರಿಮೆಂಟ್ ಕಾಪಿಯನ್ನು ನಾವು ನೋಡಿದ್ದೇನೆ. ಅಗ್ರಿಮೆಂಟ್‌ನಲ್ಲಿ 23 ಕೋಟಿ

ರೂಪಾಯಿ ಇದೆ. ಈಗ 18 ಕೋಟಿ ರೂ ಎಂದು ಹೇಳುತ್ತಿದ್ದೀರಿ. ನೀವು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದೀರಿ.

ಶ್ರೀ ಡಿ.ಬಿ. ಇನಾಂದಾರ್ :- ತಪ್ಪು ಮಾಹಿತಿಯಲ್ಲ. ಇದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಬಂದಂಥ ಕಾಗದಪತ್ರ ಎಂದು ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ :- ಈ ಕಿಯೋನಿಕ್ಸ್ ಮತ್ತು ಹೆಚ್‌ಡಿಎಫ್‌ಸಿ ನಡುವೆ ಅಗ್ರಿಮೆಂಟ್ ಏನಿದೆ, ಅದು 23 ಕೋಟಿ ರೂಪಾಯಿ ಅಗ್ರಿಮೆಂಟ್. ಅದನ್ನು ಮುಚ್ಚಿಡುತ್ತಿದ್ದೀರಿ. ದಯವಿಟ್ಟು ಅದನ್ನು ಸದನದ ಮುಂದಿಡಿ. ಅದನ್ನು ಮುಚ್ಚಿಟ್ಟು 18 ಕೋಟಿ ರೂಪಾಯಿ ಎಂದು ಸಾಧನೆ ಮಾಡುತ್ತಿದ್ದೀರಲ್ಲಾ, ಇದು ಸರಿಯಲ್ಲ. ಮಹಾನಗರಕ್ಕೆ ಅನ್ಯಾಯ ಮಾಡಿದ್ದೀರಿ. ನೀವು ಅಧಿಕಾರಿಗಳ ಮಾತನ್ನು ಕೇಳುವಂಥದ್ದಲ್ಲ. ನೀವೊಂದು ರಾಜಕೀಯ ನಿರ್ಣಯವನ್ನು ಕೈಗೊಳ್ಳಿ. ಅವರು ಅಧಿಕಾರಿಗಳು ಬೇಕಾದ್ದು ಹೇಳುತ್ತಾರೆ. ಆ ಅಗ್ರಿಮೆಂಟ್ ಕಾಪಿಯನ್ನು ಸದನದ ಮುಂದಿಡಿ. ಸದನದ ಮುಂದೆ ಇಡುವುದಕ್ಕೆ ಆಗುತ್ತದೋ ಇಲ್ಲವೋ ದಯವಿಟ್ಟು ಅವರು ಹೇಳಬೇಕು. ಅಗ್ರಿಮೆಂಟ್ ಕಾಪಿ ಇಟ್ಟರೆ 23 ಕೋಟಿ ರೂಪಾಯಿ ವಿಷಯ ಹೊರಗೆ ಬರುತ್ತದೆ.

ಶ್ರೀ ಡಿ.ಬಿ. ಇನಾಂದಾರ್ :- ಮಾನ್ಯ ಅಧ್ಯಕ್ಷರೇ, ಅಗ್ರಿಮೆಂಟ್ ಎಲ್ಲಾ ಇದೆ. ಅವರ ಪ್ರಕಾರ 10.43 ಕೋಟಿ ರೂಪಾಯಿಗಳು ನಮಗೆ ಬರಬೇಕಾಗಿದೆ. ಈ ಮಾಹಿತಿಯನ್ನು ಬೇಕಾದರೆ ತಮಗೆ ನಾನು ಕೊಟ್ಟು ಕಳುಹಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಇನಾಂದಾರ್‌ರವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಗಂಭೀರವಾದ ಪ್ರಶ್ನೆಯನ್ನು ಎತ್ತಿದ್ದಾರೆ. ತಾವು ತಮ್ಮ ಕಛೇರಿಗೆ ಕರೆಸಿ ಅಲ್ಲಿ ಏನೇನು ಮಾಡಬೇಕು ಎಂಬುದನ್ನು ನೋಡಿ ಸಮಸ್ಯೆಗಳನ್ನು ಬಗೆಹರಿಸಿ. ಸುಮ್ಮನೆ ಇಲ್ಲಿ ಡಿಸ್ಕಷನ್ ಬೇಡಿ. ಅಥವಾ ನಮ್ಮ ಕಛೇರಿಗೆ ಬನ್ನಿ. ಎಲ್ಲಾ ಕುಳಿತುಕೊಂಡು ನೋಡೋಣ. ನಮ್ಮ ಕಛೇರಿಗೆ ತನ್ನಿ ನೋಡೋಣ.

ಶ್ರೀ ಡಿ.ಬಿ. ಇನಾಂದಾರ್ :- ಮಾನ್ಯ ಅಧ್ಯಕ್ಷರೇ, ಎಲ್ಲವನ್ನೂ ತಮ್ಮ ಕಛೇರಿಗೆ ಕರೆಸುತ್ತೇನೆ.

ಅಧ್ಯಕ್ಷರು :- ಆಯಿತು ನೋಡೋಣ ನಮ್ಮ ಕಛೇರಿಗೆ ತಂದು ತೋರಿಸುತ್ತಾರೆ. ತಮ್ಮನ್ನೂ ಕರೆಯುತ್ತೇನೆ. ಮುಂದಿನ ಪ್ರಶ್ನೆ ಶ್ರೀ ಕೆ. ಗೋಪಾಲ್ ಪೂಜಾರಿಯವರು.

(ಮಾನ್ಯ ಕೆ. ಗೋಪಾಲ ಪೂಜಾರಿಯವರು ಗೈರು ಹಾಜರಾಗಿದ್ದರು)

ಗೌರಿಬಿದನೂರಿನಲ್ಲಿ ನೂತನ ಕ್ರೀಡಾಂಗಣ ನಿರ್ಮಾಣ

19 (166) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ಪಟ್ಟಣದಲ್ಲಿ ಹೊಸದಾಗಿ ಕ್ರೀಡಾಂಗಣ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು? ಯಾವ ಸಮಯದಲ್ಲಿ ಕ್ರೀಡಾಂಗಣ ಕಾಮಗಾರಿಯನ್ನು ಪೂರೈಸಿ ಕ್ರೀಡಾಪಟುಗಳಿಗೆ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :